| Form No.4 (Civil)<br>Deposition Sheets<br>(R.P.No.57) |
|---|

# ವಿಶೇಷ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಯಾದಗಿರಿ

ಸ್ಪೆಷಲ್.ಸಿ. ಸಂಖ್ಯೆಃ 60/2016

ಪ್ರಾ.ಸಾ. 1 ಚಾ.ಸಾ. 1

| | |
|---|---|
| ಸಾಕ್ಷಿದಾರರ ಹೆಸರು | : ಶಿವಲಿಂಗಪ್ಪ |
| ತಂದೆಯ ಹೆಸರು | : ಶಿವಪ್ಪ ದೊಡ್ಡಮನಿ |
| ವಯಸ್ಸು | 57 ವರ್ಷಗಳು |
| ಉದ್ಯೋಗ | : ಒಕ್ಕಲುತನ |
| ವಾಸ | : ಗೋನಾಳ ಎಸ್.ಡಿ |

ಪ್ರಮಾಣವಚನ ಬೋಧಿಸಿದ ದಿನಾಂಕಃ 30-07-2021

ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ

ಚಾಸಾ-4 ಮಂಜುನಾಥ ನನ್ನ ಮಗ. ನಾವು ಪರಿಶಿಷ್ಟ ಜಾತಿಗೆ ಸೇರಿದವರು. ಕೋರ್ಟಿನ ಮುಂದಿರುವ ಆರೋಪಿ-1 ರಿಂದ 3 ಗೊತ್ತು. ಅವರು ಲಿಂಗಾಯತ ಜಾತಿಗೆ ಸೇರಿದವರು. ನನಗೆ ಚಾಸಾ-2 ಚೆನ್ನಬಸವ ತಂದೆ ಪರಮಣ್ಣ ಪೂಜಾರಿ ಇವರ ಪರಿಚಯ ಇದೆ ಅವರು ಈಗ ತೀರಿಕೊಂಡಿದ್ದಾರೆ.

2. ದಿಃ 31.03.2016 ರಂದು ರಾತ್ರಿಃ 10.30 ರಿಂದ 11.00 ವೇಳೆಗೆ ಗೋನಾಳ ಎಸ್.ಡಿ ಗ್ರಾಮದಲ್ಲಿ ಅಮಾತೆಪ್ಪನ ಹೊಲದಲ್ಲಿ ನಾನು ಮತ್ತು ನನ್ನ ತಮ್ಮ ನಾಗಪ್ಪ ಹೋಗಿದ್ದೆವು. ಅಲ್ಲಿ ನನ್ನ ಮಗ ಮಂಜುನಾಥನಿಗೆ ಆರೋಪಿತರು ಹೊಡೆದಿದ್ದಾರೆ. ನಾವು ಹೊಲದಲ್ಲಿ ಕೌಳಿ ಬೆಳೆ ಇದ್ದ ಕಾರಣ ಹೊಲದ ಸುತ್ತ ಬೇಲಿ ಹಾಕಿದ್ದೆವು. ಆರೋಪಿತರು ನಾವು ಹಾಕಿದ ಬೇಲಿಯನ್ನು ಕಟ್ ಮಾಡಿದರು. ಬೇಲಿಯನ್ನ ಯಾಕೆ ಕಟ್ ಮಾಡಿದ್ದೀರಿ ಅಂತಾ ನಾನು ಆರೋಪಿತರನ್ನು ಕೇಳಿದ್ದೇನೆ.

3. ಆರೋಪಿತರು ನಮ್ಮ ಮಗನ ಜೊತೆ ಜಗಳ ತೆಗೆದರು. ಆರೋಪಿತರೆಲ್ಲಾ ರಾತ್ರಿ 10.30 ರಿಂದ 11.00 ಗಂಟೆಗೆ ಚಾಸಾ-4 ಮಂಜುನಾಥ ಇವರಿಗೆ ಅಮಾತೆಪ್ಪನ ಹೊಲದಲ್ಲಿ ಹೊಡೆದಿದ್ದಾರೆ. 1ನೇ ಆರೋಪಿ ರವಿಂದ್ರಪ್ಪ ಬಡಿಗೆಯಿಂದ ನನ್ನ ಮಗನ ತಲೆಗೆ ಮತ್ತು ಮೈಗೆ ಹೊಡೆದಿದ್ದಾರೆ. ಯಾಕೆ

ಹೊಡೆಯುತ್ತಿದ್ದೀರಿ ಅಂತಾ ಕೇಳಿದಾಗ ಹೊಲೆ ಸೂಳೇ ಮಕ್ಕಳೇ ನಿಮ್ಮದು ತಿಂಡಿ ಬಹಳ ಆಗಿದೆ ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದಾರೆ.

4. ನಾವು ಈ ಕುರಿತು ಪೋಲೀಸ್ ಫಿರ್ಯಾದು ಕೊಟ್ಟಿದ್ದೇವೆ. ಸಾಕ್ಷಿ ಕೋರ್ಟಿನ ಮುಂದೆ ಫಿರ್ಯಾದು ಮತ್ತು ತಮ್ಮ ಸಹಿ ನೋಡಿ ಗುರುತುಮಾಡಿದ್ದು, ಸದರಿ ದಾಖಲೆಯನ್ನು ಈಗ ನಿಪಿ-1 ಅಂತಾ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಅಂತಾ ಗುರುತುಮಾಡಲಾಯಿತು.

5. ಪೋಲೀಸರು ನಂತರ ಗುನ್ಹಾ ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿ ಪಂಚನಾಮೆ ಮಾಡಿ ಫೋಟೋ ತೆಗೆದಿದ್ದಾರೆ. ಸಾಕ್ಷಿ ಕೋರ್ಟಿನ ಮುಂದೆ ಗುನ್ಹಾ ಸ್ಥಳದ ಪಂಚನಾಮೆ ಮತ್ತು ತಮ್ಮ ಸಹಿ ನೋಡಿ ಗುರುತುಮಾಡಿದ್ದು, ಸದರಿ ದಾಖಲೆಯನ್ನು ಈಗ ನಿಪಿ-2 ಅಂತಾ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಅಂತಾ ಗುರುತುಮಾಡಲಾಯಿತು. ಆ ಕಾಲಕ್ಕೆ ತೆಗೆದ ಫೋಟೋವನ್ನು ಸಾಕ್ಷಿ ನೋಡಿ ಗುರುತು ಮಾಡಿದ್ದು ಅದನ್ನು ನಿಪಿ-3 ಅಂತಾ ಗುರುತುಮಾಡಲಾಯಿತು. ಪೋಲೀಸರು ಪಂಚನಾಮೆ ಕಾಲಕ್ಕೆ ಬಡಿಗೆಯನ್ನು ಅಮಾನತ್ತು ಮಾಡಿದ್ದಾರೆ. ಸಾಕ್ಷಿ ಕೋರ್ಟಿನ ಮುಂದೆ ಬಡಿಗೆಯನ್ನು ನೋಡಿ ಗುರುತು ಮಾಡಿದ್ದು ಅದನ್ನು ಮುಮಾ-1 ಅಂತಾ ಗುರುತುಮಾಡಲಾಯಿತು.

6. ದಿಃ 01.04.2016 ರಂದು ಪೋಲೀಸರು ನಾನು ಹಾಜರುಪಡಿಸಿದ ಟ್ರ್ಯಾಕ್ಟರನ್ನು ಅಮಾನತ್ತು ಮಾಡಿಕೊಂಡಿದ್ದಾರೆ. ಟ್ರ್ಯಾಕ್ಟರ ಸಂಖ್ಯೆ ನನಗೆ ಗೊತ್ತಿಲ್ಲ, ಅದು ನೀಲಿ ಬಣ್ಣದ ಟ್ರ್ಯಾಕ್ಟರ ಇರುತ್ತದೆ. ಅದನ್ನು ನೋಡಿದರೆ ನಾನು ಗುರುತುಮಾಡುತ್ತೇನೆ. ಟ್ರ್ಯಾಕ್ಟರ 1ನೇ ಆರೋಪಿ ರವಿಂದ್ರಪ್ಪನ ಮನೆಯ ಮುಂದೆ ನಿಂತಿತ್ತು. ಇಷ್ಟನ್ನು ಹೊರತುಪಡಿಸಿ ನನಗೆ ಬೇರೆ ಏನು ಗೊತ್ತಿಲ್ಲ.

(ಈ ಹಂತದಲ್ಲಿ ವಿಶೇಷ ಸಾರ್ವಜನಿಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದರು. ಅನುಮತಿ ಕೊಟ್ಟಿದೆ)

<u>ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>

7. ದಿಃ31.03.2016 ರಂದು ರಾತ್ರಿ 11.00 ಗಂಟೆಗೆ ಅಮಾತೆಪ್ಪನ ಹೊಲದ ಮುಲಿ ಹತ್ತಿರ 1ನೇ ಆರೋಪಿ ರವಿಂದ್ರಪ್ಪ ತನ್ನ ಟ್ರ್ಯಾಕ್ಟರ್ ಅಡ್ಡಗಟ್ಟಿ ನಿಲ್ಲಿಸಿ ಟ್ರ್ಯಾಕ್ಟರ ಲೈಟಿನ ಬೆಳಕಿನಲ್ಲಿ 1ನೇ ಆರೋಪಿ

ರವಿಂದ್ರಗೌಡ 2ನೇ ಆರೋಪಿ ಶಂಕರಗೌಡ ಇವರು ಕೈಯಿಂದ ನನ್ನ ಮಗ ಮಂಜುನಾಥನಿಗೆ ಹೊಡೆದಿದ್ದಾರೆ ಎಂದರೆ ಸರಿ. 3ನೇ ಆರೋಪಿ ಗೌಡಪ್ಪಗೌಡ ನನ್ನ ಮಗನನ್ನು ಹಿಡಿದುಕೊಂಡಿದ್ದಾನೆ ಎಂದರೆ ಸರಿ. ಆಗ 1ನೇ ಆರೋಪಿ ರವಿಂದ್ರಗೌಡ ನನ್ನ ಮಗನಿಗೆ ಬಡಿಗೆಯಿಂದ ನನ್ನ ಮಗನಿಗೆ ಬೆನ್ನಿಗೆ, ಬಲಗೈಗೆ, ಮೊಳಕೈಗೆ, ಮುಂಗೈ ಹೊಡೆದಿದ್ದಾನೆ ಎಂದರೆ ಸರಿ. ಆರೋಪಿತರು ಜೀವದ ಬೆದರಿಕೆ ಹಾಕಿದರು ಎಂದರೆ ಸರಿ. ಈಗ ಆರೋಪಿತರೆಲ್ಲಾ ಕೋರ್ಟಿನ ಮುಂದೆ ಇದ್ದಾರೆ.

ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಸ್‌ಎಕ್ಯೂ ವಕೀಲರಿಂದ ಃ

8. ನಮ್ಮ ಹೊಲ ಮತ್ತು ಆರೋಪಿತರ ಹೊಲ ಆಜು ಬಾಜು ಇದೆ ಎಂದರೆ ಸರಿ. ನಮಗೂ ಮತ್ತು ಆರೋಪಿತರಿಗೂ ಮೊದಲಿನಿಂದಲೂ ವೈಮನಸ್ಸು ಇದೆ ಎಂದರೆ ಸರಿಯಲ್ಲ. ಆರೋಪಿತರು ತಮ್ಮ ಹೊಲದಲ್ಲಿ ಮೋಟಾರ ಕೂಡಿಸಿದ ವಿಚಾರದಲ್ಲಿ ಮೋಟಾರ ಕೂಡಿಸಿದಾಗ ನಮಗೂ ಮತ್ತು ಆರೋಪಿತರಿಗೆ ಮೊದಲು ಜಗಳ ಆಗಿತ್ತು ಎಂದರೆ ಸರಿ. ಆ ಕಾಲಕ್ಕೆ ನಾವು ಆರೋಪಿತರ ಮೊಟಾರನ್ನು ಒಡೆದು ಹಾಕಿ ಸುಮಾರು ಒಂದು ಲಕ್ಷನಷ್ಟು ಲುಖುಸಾನು ಮಾಡಿದ್ದೇವು ಎಂದರೆ ಸರಿಯಲ್ಲ.

9. ನನ್ನ ಮಗ ಮಂಜುನಾಥ ಮತ್ತು ನನ್ನ ಅಳಿಯ ಮೌನೇಶ ವಿರುದ್ದ ಆರೋಪಿತರ ಮನೆಯವರು ಸುರಪೂರ ಕೋರ್ಟಿನಲ್ಲಿ ಕ್ರಿಮಿನಲ್ ಪ್ರಕರಣ ದಾಖಲು ಮಾಡಿದ್ದಾರೆ ಎಂದರೆ ಸರಿ. ದಿಃ 31.03.2016 ರಂದು ರಾತ್ರಿ 12.00 ಗಂಟೆಗೆ ಗಲಾಟೆ ಆಗಿದೆ ಅಂತಾ ಹೇಳಿ 1ನೇ ಆರೋಪಿತನ ಹೆಂಡತಿ ಫಿರ್ಯಾದು ಕೊಟ್ಟಿದ್ದಾರೆ ಎಂದರೆ ಸರಿ. ರಾತ್ರಿ 11.00 ಗಂಟೆಗೆ ಆರೋಪಿತರು ನನ್ನ ಗಂಡನಿಗೆ ಹೊಡೆ ಬಡೆ ಮಾಡುತ್ತಿದ್ದಾಗ ನಾನು ಬಿಡಿಸಲು ಹೋದಾಗ ನನಗೆ ಅವಮಾನ ಮಾಡಿದ್ದಾರೆ ಅಂತಾ ಹೇಳಿ 1ನೇ ಆರೋಪಿತನ ಹೆಂಡತಿ ಫಿರ್ಯಾದು ಕೊಟ್ಟಿದ್ದಾರೆ ಎಂದರೆ ಸರಿ.

10. "ದಿಃ 31.03.2016 ರಂದು ರಾತ್ರಿಃ 10.30 ರಿಂದ 11.00 ವೇಳೆಗೆ ಗೋನಾಳ ಎಸ್.ಡಿ ಗ್ರಾಮದಲ್ಲಿ ಅಮಾತೆಪ್ಪನ ಹೊಲದಲ್ಲಿ ನಾನು ಮತ್ತು ನನ್ನ ತಮ್ಮ ನಾಗಪ್ಪ ಹೋಗಿದ್ದೆವು" ಅಂತಾ ಸುಳ್ಳು ಸಾಕ್ಷ್ಯ ಕೊಟ್ಟಿದ್ದೇನೆಂದರೆ ಸರಿಯಲ್ಲ. ಈ ವಿಚಾರವನ್ನು ನಾನು ಇದೇ ಮೊದಲ ಬಾರಿಗೆ ಕೋರ್ಟಿನಲ್ಲಿ ಹೇಳಿದ್ದೇನೆಂದರೆ ಸರಿಯಲ್ಲ.

11. ಆರೋಪಿತರು ನನ್ನ ಮಗನಿಗೆ ತಲೆಗೆ ಬಡಿಗೆಯಿಂದ ಹೊಡೆದಾಗ ರಕ್ತ ಬಂದಿದ್ದು ಆ ರಕ್ತ ನನ್ನ ಮಗ ಬಟ್ಟೆಯ ಮೇಲೆ ಮತ್ತು ನೆಲದ ಮೇಲೆ ಬಿದ್ದಿತ್ತು, ನನ್ನ ಮಗನನ್ನ ನಾನೇ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇನೆ. ನಾನು ಪೋಲೀಸರಿಗೆ ಮತ್ತು ಡಾಕ್ಟರ್‌ಗೆ ರಕ್ತ ತೋರಿಸಿದ್ದೇನೆ. ಗಲಾಟೆ ಆದಾಗ ನಾನು ಸ್ಥಳದಲ್ಲಿ ಇರಲಿಲ್ಲಾ ಮತ್ತು ಗಲಾಟೆ ಶಬ್ದ ಕೇಳಿ ಸ್ಥಳಕ್ಕೆ ಬಂದೆ ಎಂದರೆ ಸರಿ. ಗಲಾಟೆಯನ್ನು ನಾನು ಕಣ್ಣಾರೆ ನೋಡಿಲ್ಲಾ ಎಂದರೆ ಸರಿಯಲ್ಲ.

12. ನಿಪಿ-1 ಫಿರ್ಯಾದಿಯಲ್ಲಿ ನಾನು ಆಗ ನೀವು ಮತ್ತು ನಾಗಪ್ಪ ಬಂದಾಗ ಇವತ್ತು ಇಷ್ಟಕ್ಕೆ ಬಿಟ್ಟೇವಿ ಒಂದಿಲ್ಲಾ ಒಂದು ದಿವಸ ಜೀವದಿಂದ ಹೊಡೆದು ಖಲಾಸ್ ಮಾಡುತ್ತೇವೆ ಅಂತಾ ಜೀವದ ಬೆದರಿಕೆ ಹಾಕಿ ಹೋದರು ಅಂತಾ ಬರೆಸಿದ್ದೇನೆಂದರೆ ಸರಿ.

13. ಸದರಿ ಭಾಗವನ್ನು ಎರಡು ಕಡೆಯವರಿಗೆ ವಾದ ಮಂಡಿಸುವ ಅವಕಾಶವನ್ನು ಕಾಯ್ದಿರಿಸಿ ಸದರಿ ಭಾಗವನ್ನು ನಿಡಿ-1 ಅಂತಾ ಗುರುತು ಮಾಡಲಾಯಿತು.

14. ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆಂದರೆ ಸರಿ. ನಾನು ಹೇಳಿಂದತೆ ಹೇಳಿಕೆ ಬರೆದುಕೊಂಡಿದ್ದಾರೆ ಎಂದರೆ ಸರಿ. ನಿಪಿ-1 ಫಿರ್ಯಾದಿಯಲ್ಲಿ ನಾನು ನನ್ನ ಮಗನಿಗೆ ವಿಚಾರಿಸಿದಾಗ ನಾನು ಮತ್ತು ಮಾವನಾದ ಮಾನಪ್ಪ ಇಬ್ಬರು ಹೊಲಕ್ಕೆ ಬಂದಾಗ ನಮ್ಮ ಹೊಲದ ಸುತ್ತಲು ಹಾಕಿದ್ದ ಸೋಲಾರ್ ಬೇಲಿ ಕಟ್ ಮಾಡಿದ್ದು ನಾನು ಮತ್ತು ರವಿಂದ್ರಪ್ಪ ಮತ್ತು ಶಂಕ್ರಪ್ಪ ಇವರಿಗೆ ಯಾಕೆ ಸೋಲಾರ್ ಬೇಲಿ ಕಟ್ ಮಾಡಿದ್ದೀರಿ ಅಂತಾ ಕೇಳಿದಕ್ಕೆ ಅವರು ಏನಲೇ ಮಂಜ್ಯಾ ನಮಗೇನು ಶಂಟಾ ಕೇಳತಿ ಹೊಲೆ ಸೂಳೆ ಮಗನೆ ಅಂತಾ ಜಾತಿ ಎತ್ತಿ ಅವಾಚ್ಯವಾಗಿ ಬೈಯುತ್ತಿದ್ದಾಗ ಅವರು ನಮ್ಮ ಜೊತೆ ವಾದ ವಿವಾದ ಮಾಡುತ್ತಾ ನಮ್ಮೂರಿನ ಅಮಾತೆಪ್ಪ ಹೊಲ ಮೂಲೆ ಹತ್ತಿರ ರೋಡಿನ ಮೇಲೆ ರವಿಂದ್ರಪ್ಪ ಇವರು ಟಾರ್ಯಕ್ಟರ ಅಡ್ಡಗಟ್ಟಿ ನಿಲ್ಲಿಸಿ ಲೈಟಿನ ಬಳಕಿನಲ್ಲಿ ನನಗೆ ಮತ್ತು ರವಿಂದ್ರ ಮತ್ತು ಶಂಕ್ರಪ್ಪ ಇಬ್ಬರೂ ಕೂಡಿ ಕೈಯಿಂದ ಮೈಕೈಗೆ ಹೊಡೆದು ಅಲ್ಲಿಯೇ ಟ್ರ್ಯಾಕ್ಟರನಲ್ಲಿ ಇದ್ದ ಒಂದು ಕಬ್ಬಿಣದ ರಾಡನ್ನು ತೆಗೆದುಕೊಂಡು ರವಿಂದ್ರ ಈತನು ನನ್ನತಲೆಗೆ ಮತ್ತು ಬಲಗಾಲ ಮೊಣಕಾಲಿಗೆ ಹೊಡೆದು ರಕ್ತ ಗಾಯ ಮಾಡಿದನು ಅಂತಾ ಹೇಳಿದ್ದೇನೆಂದರೆ ಸರಿ.

15. ಸದರಿ ಭಾಗವನ್ನು ಎರಡು ಕಡೆಯವರಿಗೆ ವಾದ ಮಂಡಿಸುವ ಅವಕಾಶವನ್ನು ಕಾಯ್ದಿರಿಸಿ ಸದರಿ ಭಾಗವನ್ನು ನಿಡಿ-2 ಅಂತಾ ಗುರುತು ಮಾಡಲಾಯಿತು.

16. ಆರೋಪಿತರ ವಿರುದ್ದ ನಮಗೆ ವೈಮನಸ್ಸು ಇದ್ದ ಕಾರಣ ನನ್ನ ಮಗ ಟಾರ್‍ಯಕ್ಟರನಿಂದ ಬಿದ್ದು ಗಾಯ ಮಾಡಿಕೊಂಡಿದ್ದನ್ನ ಉಪಯೋಗ ಮಾಡಿಕೊಂಡು ಆರೋಪಿತರ ವಿರುದ್ದ ಸುಳ್ಳು ಫಿರ್ಯಾದು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ಹೊಡೆದಿಲ್ಲಾ ಎಂದರೆ ಸರಿಯಲ್ಲ. ಯಾವುದೇ ಗಲಾಟೆ ಆಗಿಲ್ಲಾ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಇರಲಿಲ್ಲಾ ಎಂದರೆ ಸರಿಯಲ್ಲ. ಸುಳ್ಳು ಫಿರ್ಯಾದು ಕೊಟ್ಟಿದ್ದೇನೆಂದರೆ ಸರಿಯಲ್ಲ. ಮೇಲಿನ ಅಂಶಗಳನ್ನು ನಿಡಿ-1 ಮತ್ತು 2 ಅಂತಾ ಗುರುತುಮಾಡುವಂತೆ ಆರೋಪಿತರ ವಕೀಲರು ಕೇಳಿದ್ದು ಫಿರ್ಯಾದಿ ಅಂಶಗಳನ್ನು ನಿಡಿ-1 ಮತ್ತು 2 ಅಂತಾ ಗುರುತು ಮಾಡಲು ಬರುವುದಿಲ್ಲಾ ಅಂತಾ ಮನಗಂಡು ಮವಿಯನ್ನು ತಿರಸ್ಕರಿಸಲಾಯಿತು. ವಕೀಲರಿಗೆ ಮುಂದಿನ ಪ್ರಶ್ನೆ ಕೇಳಲು ನಿರ್ದೇಶನ ಕೊಡಲಾಯಿತು.

17. ಪೋಲೀಸರು ಬಂದು ಪಂಚನಾಮೆ ಮಾಡಿದಾಗ ಮದ್ಯಾಹ್ನ 3.00 ರಿಂದ 4.00 ಗಂಟೆ ಆಗಿತ್ತು, ಪಂಚನಾಮೆಯನ್ನು ಮರುದಿನ ಮಾಡಿದ್ದಾರೆ. ಮೊದಲು ಟ್ರ್ಯಾಕ್ಟರ ಪಂಚನಾಮೆ ಮಾಡಿದ್ದಾರೆ. ಆ ನಂತರ ಗುನ್ನಾ ಸ್ಥಳದ ಪಂಚನಾಮೆ ಮಾಡಿದ್ದಾರೆ. ಪೋಲೀಸರೇ ಟ್ರ್ಯಾಕ್ಟರನ್ನು ತೆಗೆದುಕೊಂಡು ಹೋಗಿದ್ದಾರೆ. ಟ್ರ್ಯಾಕ್ಟರ ತೆಗೆದುಕೊಂಡು ಹೋದ ಕಾಲಕ್ಕೆ ಅಲ್ಲಿ ಯಾರು ಇದ್ದರು, ಸಮಯ ಏಷ್ಟು ಆಗಿತ್ತು ಮತ್ತು ಪಂಚನಾಮೆಯಲ್ಲಿ ಏನು ಬರೆದುಕೊಂಡಿದ್ದಾರೆ ಅಂತಾ ನನಗೆ ಗೊತ್ತಿಲ್ಲಾ ಎಂದರೆ ಸರಿ.

18. ನಾನು ನನ್ನ ಮಗನನ್ನು ಮೊದಲು ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಅಲ್ಲಿಂದ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇವೆ. ಪೋ.ಠಾಣೆಗೆ ಹೋದಾಗ ನನ್ನ ಮಗ ಮಾತಾನಾಡೋ ಸ್ಥಿತಿಯಲ್ಲಿ ಇದ್ದ. ಆ ಕಾಲಕ್ಕೆ ಪೋಲೀಸರು ನನ್ನನ್ನು ಮತ್ತು ನನ್ನ ಮಗನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿದ್ದಾರೆ.

19. ನಾನು ನಮ್ಮ ಊರಿನಲ್ಲಿ ನಮ್ಮ ಜನಗಳ ಪರವಾಗಿ ಮಾತನಾಡುತ್ತೇನೆ ಎಂದರೆ ಸರಿಯಲ್ಲ, ನಾನು ನಮ್ಮ ಊರಿನ ಎಂ.ಎಲ್.ಎ ಬಳಿ ಹೋಗುತ್ತೇನೆ ಎಂದರೆ ಸರಿ. ವೆಂಕಟಪ್ಪನಾಯಕ ಇವರು ಎಂ.ಎಲ್.ಎ ಎಂದರೆ ಸರಿ.

20. ವೆಂಕಟಪ್ಪನಾಯಕ ಇವರ ಮುಖಾಂತರ ನಾವು ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಿಸಿದ್ದೇವೆ ಎಂದರೆ ಸರಿಯಲ್ಲ.

21. ಸುರಪೂರ ಸರ್ಕಾರಿ ಆಸ್ಪತ್ರೆಗೆ ನಮ್ಮ ಮಗನನ್ನು ಮೊದಲು ಕರೆದುಕೊಂಡು ಹೋಗಿದ್ದು ಅಲ್ಲಿಂದ ಗುಲ್ಬರ್ಗಾ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇವೆ. ಸುರಪೂರ ಆಸ್ಪತ್ರೆಯಲ್ಲಿ 1-2 ತಾಸು ಇದ್ದು ಅಲ್ಲಿಂದ ಗುಲ್ಬರ್ಗಾ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೇವೆ.

ಸೂಚನೆಃ ಸಾಕ್ಷಿಗೆ ವೈದ್ಯರು ಮತ್ತು ಗಾಯಾಳುವಿಗೆ ಕೇಳಬೇಕಾದ ಪ್ರಶ್ನೆ ಕೇಳುತ್ತಿದ್ದು ಆಯಾ ಪ್ರಶ್ನೆಗಳನ್ನು ಸಂಬಂಧಪಟ್ಟ ಸಾಕ್ಷಿಗೆ ಕೇಳುವಂತೆ ಸೂಚನೆ ಕೊಡಲಾಯಿತು.

22. ಗುಲ್ಬರ್ಗಾ ಆಸ್ಪತ್ರೆಯಲ್ಲಿ ನನ್ನ ಮಗ ಒಂದು ತಿಂಗಳು ಇದ್ದಾನೆ. ನಾನು ಮರುದಿನ ಊರಿಗೆ ವಾಪಸ್ಸು ಬಂದಿದ್ದೇನೆ. ಹಟ್ಟಿ ಆಸ್ಪತ್ರೆಯಲ್ಲಿ ನನ್ನ ಮಗ ಒಂದು ತಿಂಗಳು ಚಿಕಿತ್ಸೆ ಪಡೆದಿದ್ದಾನೆ. ಎಲ್ಲಾ ಆಸ್ಪತ್ರೆ ದಾಖಲೆಗಳನ್ನು ಪೋಲೀಸರಿಗೆ ತೋರಿಸಿದ್ದೇವೆ. ಯಾವುದೇ ಗಲಾಟೆ ಆಗಿಲ್ಲಾ ಎಂದರೆ ಸರಿಯಲ್ಲ, ರಾಜಕೀಯ ಪ್ರಭಾವದಿಂದ ನಾವು ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ಈ ದಿನ ಸುಳ್ಳು ಸಾಕ್ಷ್ಯ ಕೊಟ್ಟಿದ್ದೇನೆಂದರೆ ಸರಿಯಲ್ಲ.

ನೋಟ್ಃ ನಿಪಿ-1ರ ಸಂಬಂಧಪಟ್ಟ ಭಾಗವನ್ನು ನಿಡಿ-1 ಮತ್ತು 2 ಅಂತಾ ಗುರುತು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ತಕರಾರು ಮಾಡಿದ್ದಾರೆ. ಆರೋಪಿ ಪರ ವಕೀಲರು ಮತ್ತು ಸರ್ಕಾರಿ ಅಭಿಯೋಜಕರಿಗೆ ಈ ಬಗ್ಗೆ ವಾದ ಮಂಡಿಸುವ ಅವಕಾಶವನ್ನು ಕಾಯ್ದಿರಿಸಲಾಯಿತು.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ ಹೇ ಕೇ ಸರಿ ಇದೆ.

ವಿಶೇಷ ಮತ್ತು ಸತ್ರ ನ್ಯಾಯಾಧೀಶರು, ಯಾದಗಿರಿ.

| |
|---|
| Form No.4 (Civil)<br>Deposition Sheets<br>(R.P.No.57) |

# ವಿಶೇಷ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಯಾದಗಿರಿ

ಸ್ಪೆಷಲ್.ಸಿ. ಸಂಖ್ಯೆ: 60/2016

ಪ್ರಾ.ಸಾ. 2 ಚಾ.ಸಾ. 3

ಸಾಕ್ಷಿದಾರರ ಹೆಸರು : ಯಂಕಪ್ಪ
ತಂದೆಯ ಹೆಸರು : ಬಸಣ್ಣ
ವಯಸ್ಸು 52 ವರ್ಷಗಳು
ಉದ್ಯೋಗ : ಕೂಲಿ
ವಾಸ : ಎಸ್.ಡಿ ಗೋನಾಳ

ಪ್ರಮಾಣವಚನ ಬೋಧಿಸಿದ ದಿನಾಂಕ: 30-07-2021

ಮುಖ್ಯ ವಿಚಾರಣೆ: ವಿಶೇಷ ಸರ್ಕಾರಿ ಅಭಿಯೋಜಕರಿಂದ

ನನಗೆ ಚಾಸಾ-2 ಚೆನ್ನಬಸವ ಗೊತ್ತು, ಅವರು ಈಗ ತೀರಿಕೊಂಡಿದ್ದಾರೆ.

2. ಈಗ್ಗೆ 05 ವರ್ಷಗಳ ಹಿಂದೆ ಪೋಲೀಸರು ಬೆಳಗ್ಗೆ ನನ್ನನ್ನು ಕರೆಯಿಸಿದ್ದರು. ನನಗೆ ವೇಳೆ ನೆನಪಿಲ್ಲಾ, ಪೋಲೀಸರು ಬಡಿಗೆ ಮತ್ತು ಟ್ರ್ಯಾಕ್ಟರ ತೋರಿಸಿ ನನ್ನ ಹೆಬ್ಬಟ್ಟಿನ ಗುರುತು ಪಡೆದಿದ್ದಾರೆ. ಗುನ್ನಾ ಸ್ಥಳದ ಪಂಚನಾಮೆಯನ್ನು ಈಗಾಗಲೇ ನಿಪಿ-2 ಅಂತಾ ಗುರುತುಮಾಡಲಾಗಿದೆ. ಪಂಚನಾಮೆ ಕಾಲಕ್ಕೆ ತೆಗೆದ ಫೋಟೋವನ್ನು ಸಾಕ್ಷಿ ನೋಡಿ ಗುರುತು ಮಾಡಿದ್ದು ಅದನ್ನು ಈಗಾಗಲೇ ನಿಪಿ-3 ಅಂತಾ ಗುರುತುಮಾಡಲಾಗಿದೆ. ಜಪ್ತಿ ಪಂಚನಾಮೆಯನ್ನು ಈಗ ನಿಪಿ-4 ಅಂತಾ ಗುರುತುಮಾಡಲಾಯಿತು. ಹೊಡೆ ಬಡೆ ಮಾಡಿದ ಬಗ್ಗೆ ಪೋಲೀಸರು ಪಂಚನಾಮೆ ಮಾಡಿದ್ದಾರೆ. ಜಾಗವನ್ನು ಶಿವಲಿಂಗಪ್ಪ ತೋರಿಸಿದ್ದಾರೆ. ಸಾಕ್ಷಿ ಕೋರ್ಟಿನ ಮುಂದೆ ಬಡಿಗೆಯನ್ನು ನೋಡಿ ಗುರುತು ಮಾಡಿದ್ದು ಅದನ್ನು ಈಗಾಗಲೇ ಮುಮಾ-1 ಅಂತಾ ಗುರುತುಮಾಡಲಾಗಿದೆ. ಇಷ್ಟನ್ನು ಹೊರತುಪಡಿಸಿ ನನಗೆ ಬೇರೇನು ಗೊತ್ತಿಲ್ಲಾ.

(ಈ ಹಂತದಲ್ಲಿ ವಿಶೇಷ ಸಾರ್ವಜನಿಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದರು. ಅನುಮತಿ ಕೊಟ್ಟಿದೆ)

ಪಾಟೀ ಸವಾಲು: ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ

3. ದಿಃ 01.04.16 ರಂದು ಸಾಃ 4.30 ರಿಂದ 5.30 ವರೆಗೆ ನನ್ನನ್ನು ಪೋಲೀಸರು ಎಸ್.ಡಿ ಗೋನಾಳ ಸೀಮಾಂತರದ ಅಮಾತೆಪ್ಪ ಇವರ ಹೊಲದ ಬಳಿ ಕರೆಸಿದ್ದರು ಎಂದರೆ ಸರಿ. ಅದೇ ದಿನ ಸಾಃ 6.00 ರಿಂದ 6.30 ವರೆಗೆ ರವಿಂದ್ರಗೌಡ ಇವರ ಮನೆಯ ಮುಂದೆ ಟ್ರ್ಯಾಕ್ಟರ ನಿಂತಿತ್ತು, ಶಿವಲಿಂಗಪ್ಪ ತೋರಿಸಿದರು ಅದನ್ನು ಪೋಲೀಸರು ಅಮಾನತು ಮಾಡಿಕೊಂಡರು ಎಂದರೆ ಸಾಕ್ಷಿ ಟ್ರ್ಯಾಕ್ಟರ ಮತ್ತು ಬಡಿಗೆ ತೆಗೆದುಕೊಂಡಿದ್ದು ಗೊತ್ತು ಉಳಿಕೆ ವಿಚಾರ ನನಗೆ ಗೊತ್ತಿಲ್ಲಾ ಅಂತಾ ಹೇಳುತ್ತಾರೆ. ಟ್ರ್ಯಾಕ್ಟರನ್ನು ನೋಡಿದರೆ ನೀವು ಗುರುತು ಮಾಡುತ್ತೀರಾ ಅಂದರೆ ಸಾಕ್ಷಿ ನೀಲಿ ಬಣ್ಣದು ಇದ್ದು ಅದನ್ನು ನೋಡಿದರೆ ಗುರುತು ಮಾಡುತ್ತೇನೆ ಅಂತಾ ಹೇಳುತ್ತಾರೆ. ಆರೋಪಿ-1 ರವಿಂದ್ರಗೌಡ ಈ ದಿನ ಕೋರ್ಟಿನ ಮುಂದೆ ಹಾಜರು ಇದ್ದಾರೆ,

<u>ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಸ್ಎಕ್ಯೂ ವಕೀಲರಿಂದ ಃ</u>

4. ಟ್ರ್ಯಾಕ್ಟರ ಮತ್ತು ಬಡಿಗೆ ತೋರಿಸಲು ನನ್ನನ್ನು ಶಿವಲಿಂಗಪ್ಪ ಕರೆಯಿಸಿದ್ದರು. ಬಡಿಗೆ ಮತ್ತು ಟ್ರ್ಯಾಕ್ಟರನ್ನು ಅಮಾನತ್ತು ಮಾಡಿಕೊಂಡ ಬಗ್ಗೆ ಏನು ಬರೆದುಕೊಂಡಿದ್ದಾರೆ ಅಂತಾ ನನಗೆ ಗೊತ್ತಿಲ್ಲಾ, ಶಿವಲಿಂಗಪ್ಪ ನನ್ನ ಜೊತೆ ಚೆನ್ನಾಗಿದಿದ್ದರಿಂದ ಶಿವಲಿಂಗಪ್ಪ ಕರೆದಿದ್ದರಿಂದ ನಾನುಬಂದು ಹೆಬ್ಬಟ್ಟಿನ ಗುರುತು ಹಾಕಿದ್ದೇನೆಂದರೆ ಸರಿಯಲ್ಲ,

5. ಪಂಚನಾಮೆ ಬಗ್ಗೆ ಫೋಟೋ ತೆಗೆದಿದ್ದಾರೆ. ಪಂಚನಾಮೆ ಮಾಡಿ ಆ ಜಾಗೆಯಲ್ಲಿ ಫೋಟೋ ತೆಗೆದರು ಅಂತಾ ಸುಳ್ಳು ಸಾಕ್ಷ್ಯ ಕೊಟ್ಟಿದ್ದೇನೆಂದರೆ ಸರಿಯಲ್ಲ, ಟ್ರ್ಯಾಕ್ಟರನ್ನು ನನಗೆ ತೋರಿಸಿದರು, ಆ ಬಗ್ಗೆ ಪಂಚನಾಮೆ ಮಾಡಿದರು ಅಂತಾ ನಾನು ಸುಳ್ಳು ಸಾಕ್ಷ್ಯ ಕೊಟ್ಟಿದ್ದೇನೆಂದರೆ ಸರಿಯಲ್ಲ, ನನಗೆ ಪ್ರಕರಣದ ಬಗ್ಗೆ ಗೊತ್ತಿಲ್ಲಾ ಎಂದರೆ ಸರಿಯಲ್ಲ, ನಾನು ಹೊಟೆಲ್ ಬಳಿ ಕುಳಿತಾಗ ಪೋಲೀಸರು ನನ್ನ ಹೆಬ್ಬಟ್ಟಿನ ಗುರುತು ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ, ಶಿವಲಿಂಗಪ್ಪ ಹೇಳಿದ ರೀತಿಯಲ್ಲಿ ನಾನು ಸುಳ್ಳು ಸಾಕ್ಷ್ಯ ಕೊಟ್ಟಿದ್ದೇನೆಂದರೆ ಸರಿಯಲ್ಲ,

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ ಹೇ ಕೇ ಸರಿ ಇದೆ.

ವಿಶೇಷ ಮತ್ತು ಸತ್ರ ನ್ಯಾಯಾಧೀಶರು, ಯಾದಗಿರಿ.

This document was created with the Win2PDF “print to PDF” printer available at
http://www.win2pdf.com

This version of Win2PDF 10 is for evaluation and non-commercial use only.

This page will not be added after purchasing Win2PDF.

http://www.win2pdf.com/purchase/